# VIDHVATH ACADEMY FOR COMPETITIVE EXAMS

+91 99722 58970, +91 97407 02455

## MISSION GARUDA PC TEST SERIES
## MGT006: MENTAL ABILITY
## TEST BOOKLET

***Time Allowed: 90 mins*** ***Maximum Marks: 100***

## INSTRUCTIONS

1. IMMEDIATELY AFTER THE COMMENCEMENT OF THE EXAMINATION, YOU SHOULD CHECK THAT THIS BOOKLET DOES NOT HAVE ANY UNPRINTED OR TURN OR MISSING PAGES OR ITEMS, ETC. IF SO, GET IT REPLACED BY A COMPLETE TEST BOOKLET.
2. ENCODE CLEARLY THE TEST BOOKLET SERIES A, B, C OR D AS THE CASE MAY BE IN THE APPROPRIATE PLACE IN THE ANSWER SHEET.
3. You have to enter your Roll Number on the Test Booklet in the Box provided alongside. Do NOT write anything else on the Test Booklet.
4. This Test Booklet contains 100 items (Questions). Each item is printed in English. Each item comprises four responses (answers). You will select the response which you want to mark on the Answer Sheet. In case you feel that there is more than one correct response with you consider the best. In any case, choose ONLY ONE response for each item.
5. You have to mark all your responses ONLY on the separate Answer Sheet provided. See direction in the answers sheet.
6. All items carry equal marks. Attempt all items. Your total marks will depend only on the number of correct responses marked by you in the answer sheet. For every incorrect response $1/4^{th}$(0.25) of the allotted marks will be deducted.
7. Before you proceed to mark in the Answer sheet the response to various items in the Test booklet, you have to fill in some particulars in the answer sheets as per instruction sent to you with your Admission Certificate.
8. After you have completed filling in all responses on the answer sheet and the examination has concluded, you should hand over to Invigilator only the answer sheet. You are permitted to take away with you the Test Booklet.
9. Sheet for rough work are appended in the Test Booklet at the end.

DO NOT OPEN THIS BOOKLET UNTIL YOU ARE ASKED TO DO SO

 ©VIDHVATH

**1.** If an amount of ` 198011 is distributed equally amongst 47 persons, how much amount would each person get ?
(a) 4123
(b) 4231
(c) 4213
(d) 4132

**2.** The difference between a two-digit number and the number obtained after interchanging the two digits of the two-digit number is 27. The sum of the two digits of the two-digit number is 15. What is the two-digit number?
(a) 87
(b) 96
(c) 69
(d) Cannot be determined

**3.** Bhuvan has some hens and some cows. If the total number of animal-heads are 71 and the total number of feet are 228, how many hens does Bhuvan have?
(a) 43
(b) 32
(c) 24
(d) None of these

**4.** 1/4 th of 2/5 th of a number is 82. What is the number?
(a) 410
(b) 820
(c) 420
(d) 220

**5.** What value should come in place of the question mark (?) in the following question ?
443 × 163 -186782 =?
(a) 45980
(b) 44890
(c) 43780
(d) 42670

**6.** If (89)2 is added to the square of a number,, the answer so obtained is 16202. What is the number?
(a) 91
(b) 8281
(c) 8649
(d) 93

**7.** What approximate value should come in place of the question mark (?) in the following question? 4444 y 56 × (23)2 + 63 = ?
(a) 45670
(b) 46290
(c) 44630
(d) 42050

**8.** 88% of 900 – (?)2 = 623
(a) 69
(b) 121
(c) 13
(d) 169

**9.** In an annual examination Harish scores a total of 421 marks out of 675. What is his approximate percentage in the annual examination?
(a) 56
(b) 72
(c) 92
(d) 62

**10.** Two candidates contested an election. If one got 520 votes which was 65% of votes, what was the total number of votes?
(a) 858
(b) 702
(c) 780
(d) None of these

**11.** Surjeet Singh's salary is 80% of Ranjeet's salary. What is Surjeet Singh's salary if Ranjeet's salary is  15000?
(a) 10,000
(b) 18,000
(c) 12,500
(d) 12,000

**12.** The population of a town is 189000. It decreases by 8% in the 1st year and increases by 5% in the 2nd year. What is the population in the town at the end of 2 years ?
(a) 193914
(b) 185472
(c) 182574
(d) 191394

VIDHVATH

1. 198011 ಮೊತ್ತವನ್ನು 47 ಜನರಿಗೆ ಸಮಾನವಾಗಿ ಹಂಚಿದರೆ, ಪ್ರತಿಯೊಬ್ಬರಿಗೆ ಎಷ್ಟು ಹಣ ಸಿಗುತ್ತದೆ?
**(a)** 4123
**(b)** 4231
**(c)** 4213
**(d)** 4132

2. ಒಂದು ಎರಡು ಅಂಕಿಯ ಸಂಖ್ಯೆಯನ್ನು ಅದರ ಅಂಕೆಗಳನ್ನು ಪರಸ್ಪರ ಬದಲಾಯಿಸಿ ಪಡೆದ ಸಂಖ್ಯೆಯಿಂದ ಕಡಿತ ಮಾಡಿದಾಗ ವ್ಯತ್ಯಾಸ 27 ಬರುತ್ತದೆ. ಆ ಎರಡು ಅಂಕಿಗಳ ಮೊತ್ತ 15 ಆಗಿದೆ. ಆ ಎರಡು ಅಂಕಿಯ ಸಂಖ್ಯೆ ಯಾವುದು?
**(a)** 87
**(b)** 96
**(c)** 69
**(d)** ನಿರ್ಧರಿಸಲಾಗುವುದಿಲ್ಲ

3. ಭುವನ್‌ನ ಬಳಿ ಕೆಲವು ಕೋಳಿಗಳು ಮತ್ತು ಕೆಲವು ಹಸುಗಳಿವೆ. ಒಟ್ಟು ತಲೆಗಳ ಸಂಖ್ಯೆ 71 ಹಾಗೂ ಒಟ್ಟು ಕಾಲುಗಳ ಸಂಖ್ಯೆ 228 ಆಗಿದ್ದರೆ, ಭುವನ್‌ನ ಬಳಿ ಎಷ್ಟು ಕೋಳಿಗಳಿವೆ?
**(a)** 43
**(b)** 32
**(c)** 24
**(d)** ಇವುಗಳಲ್ಲಿ ಯಾವುದೂ ಅಲ್ಲ

4. ಒಂದು ಸಂಖ್ಯೆಯ 2/5 ಭಾಗದ 1/4 ಭಾಗವು 82 ಆಗಿದ್ದರೆ, ಆ ಸಂಖ್ಯೆ ಎಷ್ಟು?
**(a)** 410
**(b)** 820
**(c)** 420
**(d)** 220

5. ಕೆಳಗಿನ ಪ್ರಶ್ನೆಯಲ್ಲಿ ಪ್ರಶ್ನಾರ್ಥಕ ಚಿಹ್ನೆ **(?)** ಬದಲಿಗೆ ಯಾವ ಮೌಲ್ಯ ಬರಬೇಕು?
$443 \times 163 - 186782 = ?$
**(a)** 45980
**(b)** 44890
**(c)** 43780
**(d)** 42670

6. ಒಂದು ಸಂಖ್ಯೆಯ ವರ್ಗಕ್ಕೆ $(89)^2$ ಅನ್ನು ಸೇರಿಸಿದಾಗ ಉತ್ತರ 16202 ಬರುತ್ತದೆ. ಆ ಸಂಖ್ಯೆ ಯಾವುದು?
**(a)** 91
**(b)** 8281
**(c)** 8649
**(d)** 93

7. ಕೆಳಗಿನ ಪ್ರಶ್ನೆಯಲ್ಲಿ ಪ್ರಶ್ನಾರ್ಥಕ ಚಿಹ್ನೆ **(?)** ಬದಲಿಗೆ ಯಾವ ಮೌಲ್ಯ ಬರಬೇಕು?
$4444 \div 56 \times (23)^2 + 63 = ?$
**(a)** 45670
**(b)** 46290
**(c)** 44630
**(d)** 42050

8. 900 ರ 88% − $(?)^2$ = 623
**(a)** 69
**(b)** 121
**(c)** 13
**(d)** 169

9. ವಾರ್ಷಿಕ ಪರೀಕ್ಷೆಯಲ್ಲಿ ಹರೀಶ್ 675 ಅಂಕಗಳಲ್ಲಿ 421 ಅಂಕಗಳನ್ನು ಪಡೆದಿದ್ದಾನೆ. ಅವನ ಶೇಕಡಾವಾರು ಅಂಕಗಳು ಸರಿಸುಮಾರು ಎಷ್ಟು?
**(a)** 56%
**(b)** 72%
**(c)** 92%
**(d)** 62%

10. ಚುನಾವಣೆಯಲ್ಲಿ ಇಬ್ಬರು ಅಭ್ಯರ್ಥಿಗಳು ಸ್ಪರ್ಧಿಸಿದರು. ಅವರಲ್ಲಿ ಒಬ್ಬರು 520 ಮತಗಳನ್ನು ಪಡೆದಿದ್ದು, ಅದು ಒಟ್ಟು ಮತಗಳ 65% ಆಗಿದ್ದರೆ, ಒಟ್ಟು ಮತಗಳ ಸಂಖ್ಯೆ ಎಷ್ಟು?
**(a)** 858
**(b)** 702
**(c)** 800
**(d)** ಇವುಗಳಲ್ಲಿ ಯಾವುದೂ ಅಲ್ಲ

11. ಸುರಜೀತ್ ಸಿಂಗ್ ಅವರ ವೇತನವು ರಣಜೀತ್ ಅವರ ವೇತನದ 80% ಆಗಿದೆ. ರಣಜೀತ್ ಅವರ ವೇತನ 15,000 ಆಗಿದ್ದರೆ, ಸುರಜೀತ್ ಸಿಂಗ್ ಅವರ ವೇತನ ಎಷ್ಟು?
**(a)** 10,000
**(b)** 18,000
**(c)** 12,500
**(d)** 12,000

12. ಒಂದು ಪಟ್ಟಣದ ಜನಸಂಖ್ಯೆ 1,89,000 ಆಗಿದೆ. ಮೊದಲ ವರ್ಷದಲ್ಲಿ ಅದು 8% ಇಳಿದು, ಎರಡನೇ ವರ್ಷದಲ್ಲಿ 5% ಹೆಚ್ಚಾದರೆ, 2 ವರ್ಷಗಳ ಅಂತ್ಯದಲ್ಲಿ ಆ ಪಟ್ಟಣದ ಜನಸಂಖ್ಯೆ ಎಷ್ಟು?
**(a)** 193914
**(b)** 185472
**(c)** 182574
**(d)** 191394

**13.** 56% of a number is 1064. What is 38% of that number?
(a) 666
(b) 722
(c) 856
(d) 912

**14.** What would be the simple interest obtained on an amount of` 6,535 at the rate of 10% p.a. after 6 years?
(a) 3414
(b) 3921
(c) 3807
(d) 3149

**15.** What would be the compound interest obtained on an amount of` 7800 at the rate of 5% p.a. after 3 years ?
(a) 1235.685
(b) 1229.475
(c) 1287.68
(d) 1248.750

**16.** Kamakshi was in need of funds. So, she borrowed 50,000 at the rate of 8 p.c. p.a. S.I. After 2 years, she was unable to pay back the amount. Therefore, she gave her bike to repay back the loan. Find the price of the bike.
(a) 60,000
(b) 58,000
(c) 55,000
(d) 62,000

**17.** Mohan borrowed `18,000 at 10% p.a. simple interest and then lend it to Sohan at 10% C.I. After 3 years he will earn a profit of?
(a) 558
(b) 555
(c) 560
(d) 600

**18.** The owner of a cellphone shop charges his customers 32% more than the cost price. If a customer paid 6600 for the cellphone, then what was the cost price of the cell phone?
(a) 5800
(b) 6100
(c) 5000
(d) 5400

**19.** Mohan bought a cycle for ` 475 and then sold it at a loss of 8% of the cost price. For how much did he sell the cycle ?
(a) 453
(b) 419
(c) 441
(d) 437

**20.** A person subscribing to Sky Cable for one year pays `1,785. If the monthly subscription is ` 175, how much discount does a yearly subscriber get?
(a) 18%
(b) 11%
(c) 13%
(d) 15%

**21.** A gold bracelet is sold for` 14,500 at a loss of 20%. What is the cost price of the gold bracelet?
(a) 18,125
(b) 17,400
(c) 15,225
(d) 16,800

**22.** The profit earned after selling an article for ` 996 is the same as loss incurred after selling the article for 894. What is the cost price of the article ?
(a) 935
(b) 905
(c) 945
(d) 975

**23.** Shri Ramlal purchased a TV set for 12,500 and spent ` 300 on transportation and ` 800 on installation. At what price should he sell it so as to earn an overall profit of 15%?
(a) 14,560
(b) 14,375
(c) 15,460
(d) None of these

**24.** The average of 5 consecutive odd numbers A, B, C, D and E is 45. What is the product of B and D?
(a) 2107
(b) 2205
(c) 1935
(d) 2021

 ©VIDHVATH

13. ಒಂದು ಸಂಖ್ಯೆಯ 56% = 1064 ಆಗಿದ್ದರೆ, ಆ ಸಂಖ್ಯೆಯ 38% ಎಷ್ಟು?
(a) 666
(b) 722
(c) 856
(d) 912

14. 6,535 ಮೊತ್ತಕ್ಕೆ ವರ್ಷಕ್ಕೆ 10% ಸರಳ ಬಡ್ಡಿದರದಲ್ಲಿ 6 ವರ್ಷಗಳ ನಂತರ ದೊರೆಯುವ ಸರಳ ಬಡ್ಡಿ ಎಷ್ಟು?
(a) 3414
(b) 3921
(c) 3807
(d) 3149

15. 7,800 ಮೊತ್ತಕ್ಕೆ ವರ್ಷಕ್ಕೆ 5% ಚಕ್ರಬಡ್ಡಿದರದಲ್ಲಿ 3 ವರ್ಷಗಳ ನಂತರ ದೊರೆಯುವ ಚಕ್ರಬಡ್ಡಿ ಎಷ್ಟು?
(a) 1235.685
(b) 1229.475
(c) 1287.68
(d) 1248.750

16. ಕಾಮಾಕ್ಷಿಗೆ ಹಣದ ಅಗತ್ಯವಿದ್ದುದರಿಂದ, ಅವರು 50,000 ಅನ್ನು ವರ್ಷಕ್ಕೆ 8% ಸರಳ ಬಡ್ಡಿದರದಲ್ಲಿ (S.I.) ಸಾಲವಾಗಿ ಪಡೆದರು. 2 ವರ್ಷಗಳ ನಂತರವೂ ಅವರು ಸಾಲವನ್ನು ಮರುಪಾವತಿಸಲು ಸಾಧ್ಯವಾಗಲಿಲ್ಲ. ಆದ್ದರಿಂದ, ಸಾಲ ತೀರಿಸಲು ತಮ್ಮ ಬೈಕ್ ಅನ್ನು ನೀಡಿದರು. ಆ ಬೈಕ್‌ನ ಬೆಲೆ ಎಷ್ಟು?
(a) 60,000
(b) 58,000
(c) 55,000
(d) 62,000

17. ಮೋಹನ್ 18,000 ಅನ್ನು ವರ್ಷಕ್ಕೆ 10% ಸರಳ ಬಡ್ಡಿದರದಲ್ಲಿ ಸಾಲವಾಗಿ ಪಡೆದು, ಅದನ್ನು ಸೋಹನ್‌ಗೆ ವರ್ಷಕ್ಕೆ 10% ಚಕ್ರಬಡ್ಡಿದರದಲ್ಲಿ (C.I.) ನೀಡಿದನು. 3 ವರ್ಷಗಳ ನಂತರ ಅವನು ಗಳಿಸುವ ಲಾಭ ಎಷ್ಟು?
(a) 558
(b) 555
(c) 560
(d) 600

18. ಒಂದು ಮೊಬೈಲ್ ಅಂಗಡಿಯ ಮಾಲೀಕರು ತಮ್ಮ ಗ್ರಾಹಕರಿಂದ ಖರೀದಿ ಬೆಲೆಯಿಗಿಂತ 32% ಹೆಚ್ಚು ಬೆಲೆ ಪಡೆಯುತ್ತಾರೆ. ಒಬ್ಬ ಗ್ರಾಹಕರು ಮೊಬೈಲ್‌ಗಾಗಿ 6,600 ಪಾವತಿಸಿದ್ದರೆ, ಅದರ ಖರೀದಿ ಬೆಲೆ ಎಷ್ಟು?
(a) 5,800
(b) 6,100
(c) 5,000
(d) 5,400

19. ಮೋಹನ್ ಒಂದು ಸೈಕಲ್ ಅನ್ನು 475ಕ್ಕೆ ಖರೀದಿಸಿ, ನಂತರ ಖರೀದಿ ಬೆಲೆಯ 8% ನಷ್ಟದಲ್ಲಿ ಮಾರಿದನು. ಅವನು ಸೈಕಲ್ ಅನ್ನು ಎಷ್ಟು ರೂಪಾಯಿಗೆ ಮಾರಿದನು?
(a) 453
(b) 419
(c) 441
(d) 437

20. ಸ್ಕೈ ಕೇಬಲ್‌ಗೆ ಒಂದು ವರ್ಷದ ಚಂದಾದಾರರಾಗುವ ವ್ಯಕ್ತಿ 1,785 ಪಾವತಿಸುತ್ತಾನೆ. ಮಾಸಿಕ ಚಂದಾ 175 ಆಗಿದ್ದರೆ, ವಾರ್ಷಿಕ ಚಂದಾದಾರನಿಗೆ ಎಷ್ಟು ರಿಯಾಯಿತಿ ಸಿಗುತ್ತದೆ?
(a) 18%
(b) 11%
(c) 13%
(d) 15%

21. ಒಂದು ಚಿನ್ನದ ಬಳೆಯನ್ನು 14,500ಕ್ಕೆ 20% ನಷ್ಟದಲ್ಲಿ ಮಾರಲಾಗಿದೆ. ಆ ಬಳೆಯ ಖರೀದಿ ಬೆಲೆ ಎಷ್ಟು?
(a) 18,125
(b) 17,400
(c) 15,225
(d) 16,800

22. ಒಂದು ವಸ್ತುವನ್ನು 996ಕ್ಕೆ ಮಾರಿದಾಗ ದೊರೆಯುವ ಲಾಭವು, ಅದೇ ವಸ್ತುವನ್ನು 894ಕ್ಕೆ ಮಾರಿದಾಗ ಉಂಟಾಗುವ ನಷ್ಟಕ್ಕೆ ಸಮಾನವಾಗಿದೆ. ಆ ವಸ್ತುವಿನ ಖರೀದಿ ಬೆಲೆ ಎಷ್ಟು?
(a) 935
(b) 905
(c) 945
(d) 975

23. ಶ್ರೀ ರಾಮಲಾಲ್ ಅವರು ಒಂದು ಟಿ.ವಿ. ಸೆಟ್ ಅನ್ನು 12,500ಕ್ಕೆ ಖರೀದಿಸಿದರು. ಸಾಗಣೆಗಾಗಿ 300 ಮತ್ತು ಅಳವಡಿಕೆಗಾಗಿ 800 ಖರ್ಚು ಮಾಡಿದರು. ಒಟ್ಟಾರೆ 15% ಲಾಭ ಪಡೆಯಲು ಅವರು ಟಿ.ವಿ.ಯನ್ನು ಎಷ್ಟು ಬೆಲೆಗೆ ಮಾರಬೇಕು?
(a) 14,560
(b) 14,375
(c) 15,460
(d) ಇವುಗಳಲ್ಲಿ ಯಾವುದೂ ಅಲ್ಲ

24. ಸತತ 5 ಬೆಸ ಸಂಖ್ಯೆಗಳಾದ A, B, C, D ಮತ್ತು E ಗಳ ಸರಾಸರಿ 45 ಆಗಿದೆ. ಹಾಗಾದರೆ B ಮತ್ತು D ಗಳ ಗುಣಲಬ್ಧ ಎಷ್ಟು?
(a) 2107
(b) 2205
(c) 1935
(d) 2021

**25.** Find the average of the following set of scores 566, 455, 231, 678, 989, 342, 715
(a) 590
(b) 555
(c) 568
(d) 513

**26.** The average age of five officers in a department is 32 years. If the age of their supervisor is added the average is increased by 1. What is the supervisor's age?
(a) 32 years
(b) 48 years
(c) 38 years
(d) 42 years

**27.** The average of 5 consecutive numbers A,B,C,D and E is 48. What is the product of A and E ?
(a) 2162
(b) 2208
(c) 2024
(d) 2300

**28.** If 47a + 47b = 5452 then what is the average of a and b?
(a) 11
(b) 23.5
(c) 96
(d) 58

**29.** The average age of a man and his son is 33 years. The ratio of their ages is 8:3. What is the man's age?
(a) 48 years
(b) 44 years
(c) 42 years
(d) 50 years

**30.** The average marks of a student in seven subjects are 41. After re-evaluation in one subject the marks were changed to 42 from 14 and in remaining subjects the marks remain unchanged. What are the new average marks?
(a) 45
(b) 44
(c) 46
(d) 47

**31.** Out of three given numbers, the first number is twice the second and thrice the third. If the average of the three numbers is 154, what is the difference between the first and the third number?
(a) 126
(b) 42
(c) 166
(d) 52

**32.** Seema's present age is four times her son's present age and four-seventh of her father's present age. The average of the present ages of all three of them is 32 years. What is the difference between the Seema's son's present age and Seema's father's present age?
(a) 44 years
(b) 48 years
(c) 46 years
(d) Cannot be determined

**33.** The average of 5 positive integers is 436. The average of the first two numbers is 344 and the average of the last two numbers is 554. What is the third number?
(a) 482
(b) 346
(c) 556
(d) 384

**34.** There are 1224 students in a school in which 600 are girls. What is the ratio of boys to girls in the school?
(a) 26 : 25
(b) 21 : 17
(c) 18 : 13
(d) 5 : 4

**35.** Amar started a business investing ` 45,000. Six months later Prakash joined him with ` 30,000. In what ratio should the profit, they earn be distributed at the end of the year?
(a) 3:1
(b) 3:4
(c) 3:2
(d) Data inadequate

**36.** Samir's age is one-fourth of his father's age and two-third of his sister Reema's age. What is the ratio of the ages of Samir, Reema and their father respectively?
(a) 3 : 2 : 8

25. ಕೆಳಗಿನ ಅಂಕಗಳ ಸರಾಸರಿಯನ್ನು ಕಂಡುಹಿಡಿಯಿರಿ:
566, 455, 231, 678, 989, 342, 715
**(a)** 590
**(b)** 555
**(c)** 568
**(d)** 513

26. ಒಂದು ಇಲಾಖೆಯ ಐದು ಅಧಿಕಾರಿಗಳ ಸರಾಸರಿ ವಯಸ್ಸು 32 ವರ್ಷಗಳು. ಅವರ ಮೇಲ್ವಿಚಾರಕರ **(Supervisor)** ವಯಸ್ಸನ್ನು ಸೇರಿಸಿದಾಗ ಸರಾಸರಿ 1 ವರ್ಷ ಹೆಚ್ಚುತ್ತದೆ. ಮೇಲ್ವಿಚಾರಕರ ವಯಸ್ಸು ಎಷ್ಟು**?**
**(a)** 32 ವರ್ಷಗಳು
**(b)** 48 ವರ್ಷಗಳು
**(c)** 38 ವರ್ಷಗಳು
**(d)** 42 ವರ್ಷಗಳು

27. ಸತತ 5 ಸಂಖ್ಯೆಗಳಾದ **A, B, C, D** ಮತ್ತು **E** ಗಳ ಸರಾಸರಿ 48 ಆಗಿದೆ. **A** ಮತ್ತು **E** ಗಳ ಗುಣಲಬ್ಧ ಎಷ್ಟು**?**
**(a)** 2162
**(b)** 2208
**(c)** 2024
**(d)** 2300

28. 47**a** + 47**b** = 5452 ಆಗಿದ್ದರೆ**, a** ಮತ್ತು **b** ಗಳ ಸರಾಸರಿ ಎಷ್ಟು**?**
**(a)** 11
**(b)** 23.5
**(c)** 96
**(d)** 58

29. ಒಬ್ಬ ವ್ಯಕ್ತಿ ಮತ್ತು ಅವನ ಮಗನ ಸರಾಸರಿ ವಯಸ್ಸು 33 ವರ್ಷಗಳು. ಅವರ ವಯಸ್ಸಿನ ಅನುಪಾತ 8 : 3 ಆಗಿದೆ. ಆ ವ್ಯಕ್ತಿಯ ವಯಸ್ಸು ಎಷ್ಟು**?**
**(a)** 48 ವರ್ಷಗಳು
**(b)** 44 ವರ್ಷಗಳು
**(c)** 42 ವರ್ಷಗಳು
**(d)** 50 ವರ್ಷಗಳು

30. ಒಬ್ಬ ವಿದ್ಯಾರ್ಥಿಯ 7 ವಿಷಯಗಳ ಸರಾಸರಿ ಅಂಕಗಳು 41 ಆಗಿವೆ. ಮರುಮೌಲ್ಯಮಾಪನದ ನಂತರ ಒಂದು ವಿಷಯದ ಅಂಕಗಳು 14ರಿಂದ 42ಕ್ಕೆ ಬದಲಾಗಿವೆ. ಉಳಿದ ವಿಷಯಗಳ ಅಂಕಗಳು ಹಾಗೆಯೇ ಉಳಿದಿವೆ. ಹೊಸ ಸರಾಸರಿ ಅಂಕಗಳು ಎಷ್ಟು**?**
**(a)** 45
**(b)** 44
**(c)** 46
**(d)** 47

31. ಮೂರು ಸಂಖ್ಯೆಗಳಲ್ಲಿನ ಮೊದಲ ಸಂಖ್ಯೆ ಎರಡನೇ ಸಂಖ್ಯೆಯ ಎರಡು ಪಟ್ಟು ಹಾಗೂ ಮೂರನೇ ಸಂಖ್ಯೆಯ ಮೂರು ಪಟ್ಟು ಆಗಿದೆ. ಮೂರು ಸಂಖ್ಯೆಗಳ ಸರಾಸರಿ 154 ಆಗಿದ್ದರೆ**,** ಮೊದಲ ಮತ್ತು ಮೂರನೇ ಸಂಖ್ಯೆಗಳ ನಡುವಿನ ವ್ಯತ್ಯಾಸ ಎಷ್ಟು**?**
**(a)** 126
**(b)** 42
**(c)** 166
**(d)** 52

32. ಸೀಮಾಳ ಪ್ರಸ್ತುತ ವಯಸ್ಸು ಅವಳ ಮಗನ ಪ್ರಸ್ತುತ ವಯಸ್ಸಿನ ನಾಲ್ಕು ಪಟ್ಟು ಹಾಗೂ ಅವಳ ತಂದೆಯ ಪ್ರಸ್ತುತ ವಯಸ್ಸಿನ 4/7 ಭಾಗವಾಗಿದೆ. ಇವರ ಮೂವರ ಪ್ರಸ್ತುತ ವಯಸ್ಸಿನ ಸರಾಸರಿ 32 ವರ್ಷಗಳಾಗಿದ್ದರೆ**,** ಸೀಮಾಳ ಮಗನ ಮತ್ತು ತಂದೆಯ ವಯಸ್ಸಿನ ನಡುವಿನ ವ್ಯತ್ಯಾಸ ಎಷ್ಟು**?**
**(a)** 44 ವರ್ಷಗಳು
**(b)** 48 ವರ್ಷಗಳು
**(c)** 46 ವರ್ಷಗಳು
**(d)** ನಿರ್ಧರಿಸಲಾಗುವುದಿಲ್ಲ

33. 5 ಧನ ಪೂರ್ಣಾಂಕಗಳ ಸರಾಸರಿ 436 ಆಗಿದೆ. ಮೊದಲ ಎರಡು ಸಂಖ್ಯೆಗಳ ಸರಾಸರಿ 344 ಹಾಗೂ ಕೊನೆಯ ಎರಡು ಸಂಖ್ಯೆಗಳ ಸರಾಸರಿ 554 ಆಗಿದೆ. ಮೂರನೇ ಸಂಖ್ಯೆ ಯಾವುದು**?**
**(a)** 482
**(b)** 346
**(c)** 556
**(d)** 384

34. ಒಂದು ಶಾಲೆಯಲ್ಲಿ 1224 ವಿದ್ಯಾರ್ಥಿಗಳಿದ್ದು**,** ಅವರಲ್ಲಿ 600 ಮಂದಿ ವಿದ್ಯಾರ್ಥಿನಿಯರು. ಶಾಲೆಯಲ್ಲಿರುವ ವಿದ್ಯಾರ್ಥಿಗಳು (ಹುಡುಗರು) ಮತ್ತು ವಿದ್ಯಾರ್ಥಿನಿಯರ ಅನುಪಾತ ಎಷ್ಟು**?**
**(a)** 26 : 25
**(b)** 21 : 17
**(c)** 18 : 13
**(d)** 5 : 4

35. ಅಮರ್ 45,000 ಹೂಡಿಕೆ ಮಾಡಿ ವ್ಯವಹಾರ ಆರಂಭಿಸಿದನು. ಆರು ತಿಂಗಳ ನಂತರ ಪ್ರಕಾಶ್ 30,000 ಹೂಡಿಕೆ ಮಾಡಿ ಸೇರಿಕೊಂಡನು. ವರ್ಷದ ಕೊನೆಯಲ್ಲಿ ಬಂದ ಲಾಭವನ್ನು ಯಾವ ಅನುಪಾತದಲ್ಲಿ ಹಂಚಿಕೊಳ್ಳಬೇಕು**?**
**(a)** 3 : 1
**(b)** 3 : 4
**(c)** 3 : 2
**(d)** ಮಾಹಿತಿ ಅಪರ್ಯಾಪ್ತವಾಗಿದೆ

36. ಸಮೀರ್‌ನ ವಯಸ್ಸು ಅವನ ತಂದೆಯ ವಯಸ್ಸಿನ 1/4 ಭಾಗ ಹಾಗೂ ಅವನ ಸಹೋದರಿ ರೀಮಾಳ ವಯಸ್ಸಿನ 2/3 ಭಾಗವಾಗಿದೆ. ಸಮೀರ್**,** ರೀಮಾ ಮತ್ತು ಅವರ ತಂದೆಯ ವಯಸ್ಸಿನ ಅನುಪಾತ ಕ್ರಮವಾಗಿ ಎಷ್ಟು**?**
**(a)** 3 : 2 : 8
**(b)** 3 : 4 : 8
**(c)** 2 : 3 : 8

(b) 3 : 4 : 8
(c) 2 : 3 : 8
(d) 4 : 3 : 8

**37.** The ratio of the ages of Richa and Shelly is 5 : 8. The ratio of their ages 10 years hence would be 7:10. What is the present age of Shelly?
(a) 45years
(b) 40years
(c) 35years
(d) 30years

**38.** The ratio between the present ages of P and Q is 3: 4. Four years hence Q will be five years older than P. What is P's present age?
(a) 15 years
(b) 20 years
(c) 25 years
(d) Cannot be determined

**39.** 26 men can complete a piece of work in 17 days. How many more men must be hired to complete the work in 13 days?
(a) 9
(b) 8
(c) 6
(d) 18

**40.** Work done by A in one day is half of the work done by B in one day. Work done by B is half of the work done by C in one day. If C alone can complete the work in 7 days, in how many days can A, B and C together complete the work?
(a) 28
(b) 14
(c) 4
(d) 21

**41.** 17 men can complete a piece of work in 12 days. In how many days can 6 men complete the same piece of work?
(a) 28 days
(b) 34 days
(c) 26 days
(d) 32 days

**42.** 21 binders can bind 1400 books in 15 days. How many binders will be required to bind 800 books in 20 days?
(a) 7
(b) 9
(c) 12
(d) 14

**43.** Sunil and Pradeep can complete a work in 5 days and 15 days respectively. They both work for one day and then Sunil leaves. In how many days will the remaining work be completed by Pradeep ?
(a) 11 days
(b) 12 days
(c) 15 days
(d) 8 days

**44.** 12 men complete work in 9 days. After they have worked for 6 days, 6 more men join them. How many days will they take to complete the remaining work?
(a) 2 days
(b) 3 days
(c) 4 days
(d) 5 days

**45.** Two pipes A and B when working alone can fill a tank in 36 min. and 45 min. respectively. A waste pipe C can empty the tank in 30 min. First A and B are opened. After 7 min., C is also opened. In how much time will the tank be full?
(a) 1/60
(b) 1/30
(c) 7/20
(d) 13/20

**46.** Select the option that is related to the third letter-cluster in the same way as the second letter-cluster is related to the first lettercluster. DFIM : WURN :: GENP : ?
(a) SOLJ
(b) TROK
(c) TPNL
(d) TPMK

**47.** Select the number-pair in which the two numbers are related in the same way as are the two numbers of the following number-pair. 12 : 42
(a) 15 : 52
(b) 24 : 82
(c) 8 : 28
(d) 16 : 53

**(d)** 4 : 3 : 8

37. ರಿಚಾ ಮತ್ತು ಶೆಲ್ಲಿ ಅವರ ವಯಸ್ಸಿನ ಅನುಪಾತ 5 : 8 ಆಗಿದೆ. ಇಂದಿನಿಂದ 10 ವರ್ಷಗಳ ನಂತರ ಅವರ ವಯಸ್ಸಿನ ಅನುಪಾತ 7 : 10 ಆಗುತ್ತದೆ. ಶೆಲ್ಲಿಯ ಪ್ರಸ್ತುತ ವಯಸ್ಸು ಎಷ್ಟು**?**
**(a)** 45 ವರ್ಷಗಳು
**(b)** 40 ವರ್ಷಗಳು
**(c)** 35 ವರ್ಷಗಳು
**(d)** 30 ವರ್ಷಗಳು

38. **P** ಮತ್ತು **Q** ರ ಪ್ರಸ್ತುತ ವಯಸ್ಸಿನ ಅನುಪಾತ 3: 4 ಆಗಿದೆ. ಇಂದಿನಿಂದ ನಾಲ್ಕು ವರ್ಷಗಳ ನಂತರ **Q, P** ಗಿಂತ 5 ವರ್ಷ ದೊಡ್ಡವನಾಗಿರುತ್ತಾನೆ. **P** ಯ ಪ್ರಸ್ತುತ ವಯಸ್ಸು ಎಷ್ಟು**?**
**(a)** 15 ವರ್ಷಗಳು
**(b)** 20 ವರ್ಷಗಳು
**(c)** 25 ವರ್ಷಗಳು
**(d)** ನಿರ್ಧರಿಸಲಾಗುವುದಿಲ್ಲ

39. 26 ಮಂದಿ ಒಂದು ಕೆಲಸವನ್ನು 17 ದಿನಗಳಲ್ಲಿ ಪೂರ್ಣಗೊಳಿಸಬಹುದು. ಅದೇ ಕೆಲಸವನ್ನು 13 ದಿನಗಳಲ್ಲಿ ಮುಗಿಸಲು ಇನ್ನಷ್ಟು ಎಷ್ಟು ಮಂದಿಯನ್ನು ನೇಮಿಸಬೇಕು**?**
**(a)** 9
**(b)** 8
**(c)** 6
**(d)** 18

40. **A** ಒಂದು ದಿನದಲ್ಲಿ ಮಾಡುವ ಕೆಲಸವು **B** ಒಂದು ದಿನದಲ್ಲಿ ಮಾಡುವ ಕೆಲಸದ ಅರ್ಧದಷ್ಟಿದೆ. **B** ಒಂದು ದಿನದಲ್ಲಿ ಮಾಡುವ ಕೆಲಸವು **C** ಒಂದು ದಿನದಲ್ಲಿ ಮಾಡುವ ಕೆಲಸದ ಅರ್ಧದಷ್ಟಿದೆ. **C** ಒಬ್ಬನೇ ಕೆಲಸವನ್ನು 7 ದಿನಗಳಲ್ಲಿ ಪೂರ್ಣಗೊಳಿಸಿದರೆ**, A, B** ಮತ್ತು **C** ಒಟ್ಟಿಗೆ ಆ ಕೆಲಸವನ್ನು ಎಷ್ಟು ದಿನಗಳಲ್ಲಿ ಪೂರ್ಣಗೊಳಿಸುತ್ತಾರೆ**?**
**(a)** 28
**(b)** 14
**(c)** 4
**(d)** 21

41. 17 ಮಂದಿ ಒಂದು ಕೆಲಸವನ್ನು 12 ದಿನಗಳಲ್ಲಿ ಪೂರ್ಣಗೊಳಿಸಬಹುದು. ಅದೇ ಕೆಲಸವನ್ನು 6 ಮಂದಿ ಎಷ್ಟು ದಿನಗಳಲ್ಲಿ ಪೂರ್ಣಗೊಳಿಸುತ್ತಾರೆ**?**
**(a)** 28 ದಿನಗಳು
**(b)** 34 ದಿನಗಳು
**(c)** 26 ದಿನಗಳು
**(d)** 32 ದಿನಗಳು

42. 21 ಮಂದಿ ಪುಸ್ತಕ ಬೈಂಡರ್‌ಗಳು 15 ದಿನಗಳಲ್ಲಿ 1400 ಪುಸ್ತಕಗಳನ್ನು ಬೈಂಡ್ ಮಾಡಬಹುದು. 20 ದಿನಗಳಲ್ಲಿ 800 ಪುಸ್ತಕಗಳನ್ನು ಬೈಂಡ್ ಮಾಡಲು ಎಷ್ಟು ಬೈಂಡರ್‌ಗಳು ಬೇಕಾಗುತ್ತಾರೆ**?**
**(a)** 7
**(b)** 9
**(c)** 12
**(d)** 14

43. ಸುನಿಲ್ ಮತ್ತು ಪ್ರದೀಪ್ ಕ್ರಮವಾಗಿ 5 ದಿನಗಳು ಮತ್ತು 15 ದಿನಗಳಲ್ಲಿ ಒಂದು ಕೆಲಸವನ್ನು ಪೂರ್ಣಗೊಳಿಸಬಹುದು. ಇಬ್ಬರೂ ಒಂದು ದಿನ ಒಟ್ಟಿಗೆ ಕೆಲಸ ಮಾಡುತ್ತಾರೆ. ನಂತರ ಸುನಿಲ್ ಕೆಲಸ ಬಿಟ್ಟು ಹೋಗುತ್ತಾನೆ. ಉಳಿದ ಕೆಲಸವನ್ನು ಪ್ರದೀಪ್ ಎಷ್ಟು ದಿನಗಳಲ್ಲಿ ಪೂರ್ಣಗೊಳಿಸುತ್ತಾನೆ**?**
**(a)** 11 ದಿನಗಳು
**(b)** 12 ದಿನಗಳು
**(c)** 15 ದಿನಗಳು
**(d)** 8 ದಿನಗಳು

44. 12 ಮಂದಿ 9 ದಿನಗಳಲ್ಲಿ ಒಂದು ಕೆಲಸವನ್ನು ಪೂರ್ಣಗೊಳಿಸುತ್ತಾರೆ. ಅವರು 6 ದಿನ ಕೆಲಸ ಮಾಡಿದ ನಂತರ ಇನ್ನೂ 6 ಮಂದಿ ಸೇರಿಕೊಳ್ಳುತ್ತಾರೆ. ಉಳಿದ ಕೆಲಸವನ್ನು ಪೂರ್ಣಗೊಳಿಸಲು ಅವರಿಗೆ ಇನ್ನೆಷ್ಟು ದಿನಗಳು ಬೇಕಾಗುತ್ತವೆ**?**
**(a)** 2 ದಿನಗಳು
**(b)** 3 ದಿನಗಳು
**(c)** 4 ದಿನಗಳು
**(d)** 5 ದಿನಗಳು

45. **A** ಮತ್ತು **B** ಎಂಬ ಎರಡು ಕೊಳವೆಗಳು ಪ್ರತ್ಯೇಕವಾಗಿ ಕೆಲಸ ಮಾಡಿದರೆ ಟ್ಯಾಂಕ್ ಅನ್ನು ಕ್ರಮವಾಗಿ 36 ನಿಮಿಷ ಮತ್ತು 45 ನಿಮಿಷಗಳಲ್ಲಿ ತುಂಬುತ್ತವೆ. **C** ಎಂಬ ತ್ಯಾಜ್ಯ ಕೊಳವೆ ಟ್ಯಾಂಕ್ ಅನ್ನು 30 ನಿಮಿಷಗಳಲ್ಲಿ ಖಾಲಿ ಮಾಡುತ್ತದೆ. ಮೊದಲು **A** ಮತ್ತು **B** ತೆರೆಯಲ್ಪಟ್ಟವು. 7 ನಿಮಿಷಗಳ ನಂತರ **C** ಯನ್ನೂ ತೆರೆಯಲಾಯಿತು. ಟ್ಯಾಂಕ್ ಸಂಪೂರ್ಣ ತುಂಬಲು ಎಷ್ಟು ಸಮಯ ಬೇಕಾಗುತ್ತದೆ**?**
**(a)** 1/60
**(b)** 1/30
**(c)** 7/20
**(d)** 13/20

46. ಎರಡನೇ ಅಕ್ಷರ ಸಮೂಹವು ಮೊದಲ ಅಕ್ಷರ ಸಮೂಹಕ್ಕೆ ಹೇಗೆ ಸಂಬಂಧ ಹೊಂದಿದೆಯೋ**,** ಅದೇ ರೀತಿಯಲ್ಲಿ ಮೂರನೇ ಅಕ್ಷರ ಸಮೂಹಕ್ಕೆ ಸಂಬಂಧ ಹೊಂದಿರುವ ಆಯ್ಕೆಯನ್ನು ಆರಿಸಿ.
**DFIM : WURN :: GENP : ?**
**(a) SOLJ**
**(b) TROK**
**(c) TPNL**
**(d) TPMK**

47. ಕೆಳಗಿನ ಸಂಖ್ಯೆ ಜೋಡಿಯಲ್ಲಿರುವ ಎರಡು ಸಂಖ್ಯೆಗಳ ನಡುವಿನ ಸಂಬಂಧದಂತೆಯೇ ಇರುವ ಸಂಖ್ಯೆ ಜೋಡಿಯನ್ನು ಆರಿಸಿ.
12 : 42
**(a)** 15 : 52
**(b)** 24 : 82
**(c)** 8 : 28
**(d)** 16 : 53


©ವಿದ್ವತ್

**48.** In the following two questions, which one set of letters when sequentially placed at the gaps in the given letter series shall complete it: a_ _ dba _ _ bcad _ _ da _ _cd
(a) aabbccdd
(b) bccdbcab
(c) abcddcba
(d) cbcddcbb

**49.** Sarath borrowed a sum of Rs.9000 at a Bank in Simple Interest. He borrowed the same amount from one of his friend in compound interest. If the difference between his interest is Rs.40, find the rate percentage?
(a) 5.55%
(b) 6.66%
(c) 7.77%
(d) 8.88%

**50.** The average age of three old ladies before 3 years was 42. The average age of second and third old lady 5 years ago was 25. What is the present age of first old lady?
(a) 56
(b) 69
(c) 75
(d) 84

**51.** What number will come in the place of '?'. 2, 6, 12, 20, ? ,38, 50.
(a) 24
(b) 26
(c) 28
(d) 30

**52.** A is the brother of B and C. D is C's father and B is the son of E. If D has only one daughter, which of the following cannot be true?
(a) B is the brother of A
(b) D and E are married couples
(c) A, B and C are brothers
(d) E is C's mother

**53.** The angle of elevation of a ladder leaning against a wall is 60° and the foot of the ladder is 4.6 m away from the wall. The length of the ladder is:
(a) 2.3 m
(b) 4.6 m
(c) 7.8 m
(d) 9.2 m

**54.** It was Sunday on Jan 1, 2006. What was the day of the week Jan 1, 2010?
(a) Sunday
(b) Saturday
(c) Friday
(d) Wednesday

**55.** If 6th March, 2005 is Monday, what was the day of the week on 6th March, 2004?
(a) Sunday
(b) Saturday
(c) Tuesday
(d) Wednesday

**56.** What least number must be added to 1056, so that the sum is completely divisible by 23 ?
(a) 2
(b) 3
(c) 18
(d) 21

**57.** 1397 x 1397 = ?
(a) 1951609
(b) 1981709
(c) 18362619
(d) 2031719

**58.** Two dice are tossed. The probability that the total score is a prime number is:
(a) 1/6
(b) 5/12
(c) 1/2
(d) 7/9

**59.** From a group of 7 men and 6 women, five persons are to be selected to form a committee so that at least 3 men are there on the committee. In how many ways can it be done?
(a) 564
(b) 645
(c) 735
(d) 756

**60.** In how many different ways can the letters of the word 'LEADING' be arranged in such a way that the vowels always come together?
(a) 360

48. ಕೆಳಗಿನ ಅಕ್ಷರ ಸರಣಿಯ ಖಾಲಿ ಜಾಗಗಳಲ್ಲಿ ಕ್ರಮವಾಗಿ ಯಾವ ಅಕ್ಷರಗಳ ಗುಂಪನ್ನು ಇರಿಸಿದರೆ ಸರಣಿ ಪೂರ್ಣಗೊಳ್ಳುತ್ತದೆ:
**a_ _ dba _ _ bcad _ _ da _ _ cd**
**(a) aabbccdd**
**(b) bccdbcab**
**(c) abcddcba**
**(d) cbcddcbb**

49. ಶರತ್ 9,000 ಅನ್ನು ಬ್ಯಾಂಕಿನಿಂದ ಸರಳ ಬಡ್ಡಿದರದಲ್ಲಿ ಸಾಲವಾಗಿ ಪಡೆದನು. ಅದೇ ಮೊತ್ತವನ್ನು ತನ್ನ ಸ್ನೇಹಿತನಿಂದ ಚಕ್ರಬಡ್ಡಿದರದಲ್ಲಿ ಪಡೆದನು. ಎರಡೂ ಬಡ್ಡಿಗಳ ನಡುವಿನ ವ್ಯತ್ಯಾಸ 40 ಆಗಿದ್ದರೆ, ಬಡ್ಡಿದರ ಎಷ್ಟು?
**(a)** 5.55%
**(b)** 6.66%
**(c)** 7.77%
**(d)** 8.88%

50. ಮೂರು ವೃದ್ಧೆಯರ ಸರಾಸರಿ ವಯಸ್ಸು 3 ವರ್ಷಗಳ ಹಿಂದೆ 42 ಆಗಿತ್ತು. ಎರಡನೇ ಮತ್ತು ಮೂರನೇ ವೃದ್ಧೆಯರ ಸರಾಸರಿ ವಯಸ್ಸು 5 ವರ್ಷಗಳ ಹಿಂದೆ 25 ಆಗಿತ್ತು. ಮೊದಲ ವೃದ್ಧೆಯ ಪ್ರಸ್ತುತ ವಯಸ್ಸು ಎಷ್ಟು?
**(a)** 56
**(b)** 69
**(c)** 75
**(d)** 84

51. ಪ್ರಶ್ನಾರ್ಥಕ ಚಿಹ್ನೆ (?) ಸ್ಥಾನದಲ್ಲಿ ಯಾವ ಸಂಖ್ಯೆ ಬರಬೇಕು:
2, 6, 12, 20, ?, 38, 50
**(a)** 24
**(b)** 26
**(c)** 28
**(d)** 30

52. **A** ಎಂಬವನು **B** ಮತ್ತು **C** ಯ ಸಹೋದರ. **D** ಎಂಬವನು **C** ಯ ತಂದೆ ಮತ್ತು **B** ಎಂಬವನು **E** ಯ ಮಗ. **D** ಗೆ ಒಬ್ಬಳೇ ಮಗಳು ಇದ್ದರೆ, ಕೆಳಗಿನವುಗಳಲ್ಲಿ ಯಾವುದು ಸತ್ಯವಾಗಿರಲು ಸಾಧ್ಯವಿಲ್ಲ?
**(a) B, A** ಯ ಸಹೋದರ
**(b) D** ಮತ್ತು **E** ಗಂಡ-ಹೆಂಡತಿ
**(c) A, B** ಮತ್ತು **C** ಸಹೋದರರು
**(d) E, C** ಯ ತಾಯಿ

53. ಒಂದು ಏಣಿಯು ಗೋಡೆಯ ವಿರುದ್ಧ 60° ಎತ್ತರ ಕೋನದಲ್ಲಿ ಒರಗಿದೆ. ಏಣಿಯ ಕೆಳಭಾಗ ಗೋಡೆಯಿಂದ 4.6 ಮೀ ದೂರದಲ್ಲಿದೆ. ಏಣಿಯ ಉದ್ದ ಎಷ್ಟು?
**(a)** 2.3 ಮೀ
**(b)** 4.6 ಮೀ
**(c)** 7.8 ಮೀ
**(d)** 9.2 ಮೀ

54. 2006ರ ಜನವರಿ 1 ಭಾನುವಾರವಾಗಿತ್ತು. ಹಾಗಾದರೆ 2010ರ ಜನವರಿ 1 ಯಾವ ವಾರದ ದಿನವಾಗಿತ್ತು?
**(a)** ಭಾನುವಾರ
**(b)** ಶನಿವಾರ
**(c)** ಶುಕ್ರವಾರ
**(d)** ಬುಧವಾರ

55. 2005ರ ಮಾರ್ಚ್ 6 ಸೋಮವಾರವಾಗಿದ್ದರೆ, 2004ರ ಮಾರ್ಚ್ 6 ಯಾವ ವಾರದ ದಿನವಾಗಿತ್ತು?
**(a)** ಭಾನುವಾರ
**(b)** ಶನಿವಾರ
**(c)** ಮಂಗಳವಾರ
**(d)** ಬುಧವಾರ

56. 1056ಕ್ಕೆ ಕನಿಷ್ಠ ಎಷ್ಟು ಸಂಖ್ಯೆಯನ್ನು ಸೇರಿಸಿದರೆ ಮೊತ್ತವು 23 ರಿಂದ ಸಂಪೂರ್ಣ ಭಾಗವಾಗುತ್ತದೆ?
**(a)** 2
**(b)** 3
**(c)** 18
**(d)** 21

57. 1397 × 1397 = ?
**(a)** 1951609
**(b)** 1981709
**(c)** 18362619
**(d)** 2031719

58. ಎರಡು ಪಾಶಗಳನ್ನು ಎಸೆದಾಗ, ಬಂದ ಅಂಕೆಗಳ ಮೊತ್ತವು ಅವಿಭಾಜ್ಯ ಸಂಖ್ಯೆ **(Prime Number)** ಆಗಿರುವ ಸಂಭವನೀಯತೆ ಎಷ್ಟು?
**(a)** 1/6
**(b)** 5/12
**(c)** 1/2
**(d)** 7/9

59. 7 ಪುರುಷರು ಮತ್ತು 6 ಮಹಿಳೆಯರ ಗುಂಪಿನಿಂದ 5 ಸದಸ್ಯರ ಸಮಿತಿಯನ್ನು ರಚಿಸಬೇಕು. ಸಮಿತಿಯಲ್ಲಿ ಕನಿಷ್ಠ 3 ಪುರುಷರು ಇರಬೇಕು. ಎಷ್ಟು ರೀತಿಯಲ್ಲಿ ಸಮಿತಿಯನ್ನು ರಚಿಸಬಹುದು?
**(a)** 564
**(b)** 645
**(c)** 735
**(d)** 756

60. '**LEADING**' ಎಂಬ ಪದದ ಅಕ್ಷರಗಳನ್ನು ಎಲ್ಲಾ ಸ್ವರಗಳು **(Vowels)** ಯಾವಾಗಲೂ ಒಟ್ಟಿಗೆ ಬರುವಂತೆ ಎಷ್ಟು ವಿಭಿನ್ನ ರೀತಿಯಲ್ಲಿ ಜೋಡಿಸಬಹುದು?
**(a)** 360

(b) 480
(c) 720
(d) 5040

**61.** In how many different ways can the letters of the word 'CORPORATION' be arranged so that the vowels always come together?
(a) 810
(b) 1440
(c) 2880
(d) 50400

**62.** In how many ways can the letters of the word 'LEADER' be arranged?
(a) 72
(b) 144
(c) 360
(d) 720

**63.** A clock is started at noon. By 10 minutes past 5, the hour hand has turned through:
(a) 145°
(b) 150°
(c) 155°
(d) 160°

**64.** How many times do the hands of a clock coincide in a day?
(a) 20
(b) 21
(c) 22
(d) 24

**65.** A, P, R, X, S and Z are sitting in a row. S and Z are in the centre. A and P are at the ends. R is sitting to the left of A. Who is to the right of P?
(a) A
(b) X
(c) S
(d) Z

**66.** There are 8 houses in a line and in each house only one boy lives with the conditions as given below:
1. Jack is not the neighbour Siman.
2. Harry is just next to the left of Larry.
3. There is at least one to the left of Larry.
4. Paul lives in one of the two houses in the middle.
5. Mike lives in between Paul and Larry.

If at least one lives to the right of Robert and Harry is not between Taud and Larry, then which one of the following statement is not correct?
(a) Robert is not at the left end.
(b) Robert is in between Simon and Taud.
(c) Taud is in between Paul and Jack.
(d) There are three persons to the right of Paul.

**67.** P, Q, R, S, T, U, V and W are sitting round the circle and are facing the centre:
1. P is second to the right of T who is the neighbour of R and V.
2. S is not the neighbour of P.
3. V is the neighbour of U.
4. Q is not between S and W. W is not between U and S.

Which two of the following are not neighbours?
(a) RV
(b) UV
(c) RP
(d) QW

**68.** Which one is immediate right to the V?
(a) P
(b) U
(c) R
(d) T

**69.** What is the position of S?
(a) Between U and V
(b) Second to the right of P
(c) To the immediate right of W
(d) Data inadequate.

**70.** Pointing to a photograph of a boy Suresh said, "He is the son of the only son of my mother." How is Suresh related to that boy?
(a) Brother
(b) Uncle
(c) Cousin
(d) Father

**71.** If A + B means A is the mother of B; A - B means A is the brother B; A % B means A is the father of B and A x B means A is the sister of B, which of the

**(b)** 480
**(c)** 720
**(d)** 5040

61. '**CORPORATION**' ಎಂಬ ಪದದ ಅಕ್ಷರಗಳನ್ನು ಎಲ್ಲಾ ಸ್ವರಗಳು ಯಾವಾಗಲೂ ಒಟ್ಟಿಗೆ ಬರುವಂತೆ ಎಷ್ಟು ರೀತಿಯಲ್ಲಿ ಜೋಡಿಸಬಹುದು**?**
**(a)** 810
**(b)** 1440
**(c)** 2880
**(d)** 50400

62. '**LEADER**' ಎಂಬ ಪದದ ಅಕ್ಷರಗಳನ್ನು ಎಷ್ಟು ರೀತಿಯಲ್ಲಿ ಜೋಡಿಸಬಹುದು**?**
**(a)** 72
**(b)** 144
**(c)** 360
**(d)** 720

63. ಮಧ್ಯಾಹ್ನ 12 ಗಂಟೆಗೆ ಪ್ರಾರಂಭಿಸಿದ ಗಡಿಯಾರದಲ್ಲಿ 5 ಗಂಟೆ 10 ನಿಮಿಷಗಳ ವೇಳೆಗೆ ಗಂಟೆಯ ಮುಳ್ಳು ಎಷ್ಟು ಡಿಗ್ರಿ ತಿರುಗಿರುತ್ತದೆ**?**
**(a)** 145°
**(b)** 150°
**(c)** 155°
**(d)** 160°

64. ಒಂದು ದಿನದಲ್ಲಿ ಗಡಿಯಾರದ ಎರಡು ಮುಳ್ಳುಗಳು ಎಷ್ಟು ಬಾರಿ ಒಂದೇ ಸ್ಥಾನದಲ್ಲಿ ಸೇರುತ್ತವೆ**?**
**(a)** 20
**(b)** 21
**(c)** 22
**(d)** 24

65. **A, P, R, X, S** ಮತ್ತು **Z** ಒಬ್ಬರ ಹಿಂದೆ ಒಬ್ಬರು ಸಾಲಿನಲ್ಲಿ ಕುಳಿತಿದ್ದಾರೆ. **S** ಮತ್ತು **Z** ಮಧ್ಯದಲ್ಲಿದ್ದಾರೆ. **A** ಮತ್ತು **P** ಎರಡು ತುದಿಗಳಲ್ಲಿದ್ದಾರೆ. **R, A** ಯ ಎಡಭಾಗದಲ್ಲಿ ಕುಳಿತಿದ್ದಾನೆ. **P** ಯ ಬಲಭಾಗದಲ್ಲಿ ಯಾರು ಇದ್ದಾರೆ**?**
**(a) A**
**(b) X**
**(c) S**
**(d) Z**

66. ಒಂದು ಸಾಲಿನಲ್ಲಿ 8 ಮನೆಗಳಿವೆ. ಪ್ರತಿಯೊಂದು ಮನೆಯಲ್ಲಿ ಒಬ್ಬ ಹುಡುಗ ಮಾತ್ರ ವಾಸಿಸುತ್ತಾನೆ. ಕೆಳಗಿನ ಷರತ್ತುಗಳನ್ನು ಗಮನಿಸಿ:
**1.** ಜಾಕ್**,** ಸೈಮನ್‌ನ ನೆರೆಯವನಲ್ಲ.
**2.** ಹ್ಯಾರಿ**,** ಲ್ಯಾರಿಯ ತಕ್ಷಣ ಎಡಭಾಗದಲ್ಲಿ ವಾಸಿಸುತ್ತಾನೆ.
**3.** ಲ್ಯಾರಿಯ ಎಡಭಾಗದಲ್ಲಿ ಕನಿಷ್ಠ ಒಬ್ಬ ವ್ಯಕ್ತಿ ಇದ್ದಾನೆ.
**4.** ಪಾಲ್ ಮಧ್ಯದ ಎರಡು ಮನೆಗಳಲ್ಲಿ ಒಂದರಲ್ಲಿ ವಾಸಿಸುತ್ತಾನೆ.
**5.** ಮೈಕ್**,** ಪಾಲ್ ಮತ್ತು ಲ್ಯಾರಿಯ ನಡುವೆ ವಾಸಿಸುತ್ತಾನೆ.
ಹಾಗೂ, ರಾಬರ್ಟ್‌ನ ಬಲಭಾಗದಲ್ಲಿ ಕನಿಷ್ಠ ಒಬ್ಬ ವ್ಯಕ್ತಿ ಇದ್ದಾನೆ. ಹ್ಯಾರಿ**,** ಟೌಡ್ ಮತ್ತು ಲ್ಯಾರಿಯ ನಡುವೆ ಇಲ್ಲ.
ಕೆಳಗಿನ ಯಾವ ಹೇಳಿಕೆಯು ಸರಿಯಲ್ಲ**?**
**(a)** ರಾಬರ್ಟ್ ಎಡ ತುದಿಯಲ್ಲಿ ಇಲ್ಲ.
**(b)** ರಾಬರ್ಟ್**,** ಸೈಮನ್ ಮತ್ತು ಟೌಡ್ ನಡುವೆಯಿದ್ದಾನೆ.
**(c)** ಟೌಡ್**,** ಪಾಲ್ ಮತ್ತು ಜಾಕ್ ನಡುವೆಯಿದ್ದಾನೆ.
**(d)** ಪಾಲ್‌ನ ಬಲಭಾಗದಲ್ಲಿ ಮೂರು ಮಂದಿ ಇದ್ದಾರೆ.

67. **P, Q, R, S, T, U, V** ಮತ್ತು **W** ವೃತ್ತಾಕಾರದಲ್ಲಿ ಕೇಂದ್ರದ ಕಡೆ ಮುಖಮಾಡಿ ಕುಳಿತಿದ್ದಾರೆ.
**1. P, T** ಯ ಬಲಭಾಗದಲ್ಲಿ ಎರಡನೇ ಸ್ಥಾನದಲ್ಲಿದ್ದಾನೆ. **T, R** ಮತ್ತು **V** ಯ ನೆರೆಯವನು.
**2. S, P** ಯ ನೆರೆಯವನಲ್ಲ.
**3. V, U** ಯ ನೆರೆಯವನು.
**4. Q, S** ಮತ್ತು **W** ನಡುವಿಲ್ಲ. **W, U** ಮತ್ತು **S** ನಡುವಿಲ್ಲ.
ಕೆಳಗಿನ ಯಾವ ಎರಡು ವ್ಯಕ್ತಿಗಳು ಪರಸ್ಪರ ನೆರೆಯವರಲ್ಲ**?**
**(a) RV**
**(b) UV**
**(c) RP**
**(d) QW**

68. **V** ಯ ತಕ್ಷಣದ ಬಲಭಾಗದಲ್ಲಿ ಯಾರು ಇದ್ದಾರೆ**?**
**(a) P**
**(b) U**
**(c) R**
**(d) T**

69. **S** ನ ಸ್ಥಾನ ಯಾವುದು**?**
**(a) U** ಮತ್ತು **V** ನಡುವಿನಲ್ಲಿ
**(b) P** ಯ ಬಲಭಾಗದಲ್ಲಿ ಎರಡನೇ ಸ್ಥಾನದಲ್ಲಿ
**(c) W** ಯ ತಕ್ಷಣದ ಬಲಭಾಗದಲ್ಲಿ
**(d)** ಮಾಹಿತಿ ಅಪರ್ಯಾಪ್ತವಾಗಿದೆ

70. ಒಂದು ಹುಡುಗನ ಛಾಯಾಚಿತ್ರವನ್ನು ತೋರಿಸುತ್ತಾ ಸುರೇಶ್ ಹೇಳಿದನು:
**"**ಇವನು ನನ್ನ ತಾಯಿಯ ಏಕೈಕ ಮಗನ ಮಗ.**"** ಆ ಹುಡುಗನಿಗೆ ಸುರೇಶ್ ಏನಾಗುತ್ತಾನೆ**?**
**(a)** ಸಹೋದರ
**(b)** ಚಿಕ್ಕಪ್ಪ / ಮಾವ
**(c)** ಸಂಬಂಧಿ **(Cousin)**
**(d)** ತಂದೆ

71. **A + B** ಎಂದರೆ **A, B** ಯ ತಾಯಿ.
**1. A - B** ಎಂದರೆ **A, B** ಯ ಸಹೋದರ.
**2. A % B** ಎಂದರೆ **A, B** ಯ ತಂದೆ.
**3. A × B** ಎಂದರೆ **A, B** ಯ ಸಹೋದರಿ.
ಕೆಳಗಿನ ಯಾವ ಸಂಬಂಧವು **P, Q** ಯ ತಾಯಿಯ ಸಹೋದರ **(Maternal Uncle)** ಎಂಬುದನ್ನು ತೋರಿಸುತ್ತದೆ**?**

following shows that P is the maternal uncle of Q?
(a) Q - N + M x P
(b) P + S x N - Q
(c) P - M + N x Q
(d) Q - S % P

**72.** If A is the brother of B; B is the sister of C; and C is the father of D, how D is related to A?
(a) Brother
(b) Sister
(c) Nephew
(d) Cannot be determined


**73.** If A + B means A is the brother of B; A - B means A is the sister of B and A x B means A is the father of B. Which of the following means that C is the son of M?
(a) M - N x C + F
(b) F - C + N x M
(c) N + M - F x C
(d) M x N - C + F

**74.** 120, 99, 80, 63, 48, ?
(a) 35
(b) 38
(c) 39
(d) 40

**75.** 3, 10, 101,?
(a) 10101
(b) 10201
(c) 10202
(d) 11012


**76.** In the series 2, 6, 18, 54,____ what will be the 8th term ?
(a) 4370
(b) 4374
(c) 7443
(d) 7434

**77.** Which digit will appear on the face opposite to the face with number 4?





(a) 3
(b) 5
(c) 6
(d) 2/3

**78.** Two positions of dice are shown below. How many points will be on the top when 2 points are at the bottom?



(a) 6
(b) 5
(c) 4
(d) 1

**79.** When the digit 5 is on the bottom then which number will be on its upper surface?




(a) 1
(b) 3
(c) 4
(d) 6

**80.** One morning Udai and Vishal were talking to each other face to face at a crossing. If Vishal's shadow was exactly to the left of Udai, which direction was Udai facing?
(a) East
(b) West
(c) North
(d) South

**81.** Y is in the East of X which is in the North of Z. If P is in the South of Z, then in which direction of Y, is P?
(a) North
(b) South
(c) South-East
(d) None of these

**82.** A man walks 5 km toward south and then turns to the right. After walking 3 km he turns to the left and walks 5 km. Now in which direction is he from the starting place?
(a) West
(b) South

VIDHVATH

(a) **Q - N + M × P**
(b) **P + S × N - Q**
(c) **P - M + N × Q**
(d) **Q - S % P**

72. **A, B** ಯ ಸಹೋದರ. **B, C** ಯ ಸಹೋದರಿ. **C, D** ಯ ತಂದೆ. ಹಾಗಾದರೆ **D, A** ಗೆ ಏನಾಗುತ್ತಾನೆ/ಳಾಗುತ್ತಾಳೆ**?**
(a) ಸಹೋದರ
(b) ಸಹೋದರಿ
(c) ಸೋದರಳಿಯ / ಸೋದರಮಗ **(Nephew)**
(d) ನಿರ್ಧರಿಸಲಾಗುವುದಿಲ್ಲ

73. **A + B** ಎಂದರೆ **A, B** ಯ ಸಹೋದರ.
**1. A - B** ಎಂದರೆ **A, B** ಯ ಸಹೋದರಿ.
**2. A × B** ಎಂದರೆ **A, B** ಯ ತಂದೆ.
ಕೆಳಗಿನ ಯಾವ ಸಂಬಂಧವು **C, M** ನ ಮಗ ಎಂದು ಸೂಚಿಸುತ್ತದೆ**?**
(a) **M - N × C + F**
(b) **F - C + N × M**
(c) **N + M - F × C**
(d) **M × N - C + F**


74. 120, 99, 80, 63, 48, **?**
(a) 35
(b) 38
(c) 39
(d) 40

75. 3, 10, 101, **?**
(a) 10101
(b) 10201
(c) 10202
(d) 11012

76. ಸರಣಿಯಲ್ಲಿ: 2, 6, 18, 54, _____ 8ನೇ ಪದ ಯಾವುದು**?**
(a) 4370
(b) 4374
(c) 7443
(d) 7434


77. ಸಂಖ್ಯೆ 4 ಇರುವ ಮುಖಕ್ಕೆ ವಿರುದ್ಧವಾಗಿರುವ ಮುಖದಲ್ಲಿ ಯಾವ ಸಂಖ್ಯೆ ಇರುತ್ತದೆ**?**
(a) 3
(b) 5
(c) 6
(d) 2/3

78. ಕೆಳಗೆ ಎರಡು ಡೈಸ್‌ಗಳ ಸ್ಥಿತಿಗಳನ್ನು ತೋರಿಸಲಾಗಿದೆ. 2 ಅಂಕೆಗಳು ಕೆಳಭಾಗದಲ್ಲಿದ್ದರೆ**,** ಮೇಲ್ಭಾಗದಲ್ಲಿ ಯಾವ ಅಂಕೆಗಳು ಇರುತ್ತವೆ**?**



(a) 6
(b) 5
(c) 4
(d) 1

79. 5 ಅಂಕೆಯು ಕೆಳಭಾಗದಲ್ಲಿದ್ದಾಗ**,** ಅದರ ಮೇಲ್ಮುಖದಲ್ಲಿ ಯಾವ ಸಂಖ್ಯೆ ಇರುತ್ತದೆ**?**




(a) 1
(b) 3
(c) 4
(d) 6

80. ಒಂದು ಬೆಳಗ್ಗೆ ಉದಯ್ ಮತ್ತು ವಿಶಾಲ್ ಮುಖಾಮುಖಿಯಾಗಿ ನಿಂತು ಮಾತನಾಡುತ್ತಿದ್ದರು. ವಿಶಾಲ್‌ನ ನೆರಳು ಉದಯ್‌ನ ಎಡಭಾಗದಲ್ಲಿ ಇದ್ದರೆ**,** ಉದಯ್ ಯಾವ ದಿಕ್ಕಿನತ್ತ ಮುಖಮಾಡಿದ್ದನು**?**
(a) ಪೂರ್ವ
(b) ಪಶ್ಚಿಮ
(c) ಉತ್ತರ
(d) ದಕ್ಷಿಣ


81. **Y, X** ನ ಪೂರ್ವ ದಿಕ್ಕಿನಲ್ಲಿ ಇದೆ ಮತ್ತು **X, Z** ನ ಉತ್ತರ ದಿಕ್ಕಿನಲ್ಲಿ ಇದೆ. **P, Z** ನ ದಕ್ಷಿಣ ದಿಕ್ಕಿನಲ್ಲಿ ಇದ್ದರೆ**, Y** ಗೆ ಸಂಬಂಧಿಸಿ **P** ಯಾವ ದಿಕ್ಕಿನಲ್ಲಿ ಇರುತ್ತಾನೆ**?**
(a) ಉತ್ತರ
(b) ದಕ್ಷಿಣ
(c) ಆಗ್ನೇಯ **(South-East)**
(d) ಇವುಗಳಲ್ಲಿ ಯಾವುದೂ ಅಲ್ಲ

82. ಒಬ್ಬ ವ್ಯಕ್ತಿ 5 ಕಿ.ಮೀ ದಕ್ಷಿಣದ ಕಡೆ ನಡೆದು ನಂತರ ಬಲಕ್ಕೆ ತಿರುಗುತ್ತಾನೆ. 3 ಕಿ.ಮೀ ನಡೆದ ನಂತರ ಎಡಕ್ಕೆ ತಿರುಗಿ 5 ಕಿ.ಮೀ ನಡೆಯುತ್ತಾನೆ. ಈಗ ಅವನು ಆರಂಭದ ಸ್ಥಳದಿಂದ ಯಾವ ದಿಕ್ಕಿನಲ್ಲಿ ಇದ್ದಾನೆ**?**
(a) ಪಶ್ಚಿಮ
(b) ದಕ್ಷಿಣ
(c) ಈಶಾನ್ಯ **(North-East)**

(c) North-East
(d) South-West


**83.** One evening before sunset Rekha and Hema were talking to each other face to face. If Hema's shadow was exactly to the right of Hema, which direction was Rekha facing?
(a) North
(b) South
(c) East
(d) Data is inadequate

**84.** Which one will replace the question mark ?




(a) 25
(b) 37
(c) 41
(d) 47

**85.** Which one will replace the question mark ?




(a) 36
(b) 48
(c) 38
(d) 30

**86.** Choose the word which is different from the rest.
(a) Chicken
(b) Snake
(c) Crocodile
(d) Frog

**87.** A man complete a journey in 10 hours. He travels first half of the journey at the rate of 21 km/hr and second half at the rate of 24 km/hr. Find the total journey in km.
(a) 220 km
(b) 224 km
(c) 230 km
(d) 234 km

**88.** The H.C.F. of two numbers is 23 and the other two factors of their L.C.M. are 13 and 14. The larger of the two numbers is:
(a) 276
(b) 299
(c) 322
(d) 345

**89.** Two bells commence tolling together and toll at intervals of 2, 4, 6, 8 10 and 12 seconds respectively. In 30 minutes, how many times do they toll together?
(a) 4
(b) 10
(c) 15
(d) 16

**90.** A, B and C can do a piece of work in 20, 30 and 60 days respectively. In how many days can A do the work if he is assisted by B and C on every third day?
(a) 12 days
(b) 15 days
(c) 16 days
(d) 18 days

**91.** The length of the bridge, which a train 130 metres long and travelling at 45 km/hr can cross in 30 seconds, is:
(a) 200 m
(b) 225 m
(c) 245 m
(d) 250 m

**92.** If in a certain language, APPROACH is written as YRNTMCF, then OBJECTIVE is written as
(a) MGDHGAVXIG
(b) MDHGAVHTG
(c) MDHGAVGXC
(d) MDGHAVITG


**93.** If the number 517*324 is completely divisible by 3, then the smallest whole number in the place of * will be:
(a) 0
(b) 1
(c) 2
(d) None of these

VIDHVATH

**(d)** ನೈಋತ್ಯ **(South-West)**


83. ಒಂದು ಸಂಜೆ ಸೂರ್ಯಾಸ್ತಕ್ಕೂ ಮುನ್ನ ರೇಖಾ ಮತ್ತು ಹೇಮಾ ಮುಖಾಮುಖಿಯಾಗಿ ಮಾತನಾಡುತ್ತಿದ್ದರು. ಹೇಮಾಳ ನೆರಳು ಅವಳ ಬಲಭಾಗದಲ್ಲಿದ್ದರೆ, ರೇಖಾ ಯಾವ ದಿಕ್ಕಿನತ್ತ ಮುಖಮಾಡಿದ್ದಳು**?**
**(a)** ಉತ್ತರ
**(b)** ದಕ್ಷಿಣ
**(c)** ಪೂರ್ವ
**(d)** ಮಾಹಿತಿ ಅಪರ್ಯಾಪ್ತವಾಗಿದೆ

84. ಪ್ರಶ್ನಾರ್ಥಕ ಚಿಹ್ನೆ **(?)** ಸ್ಥಾನದಲ್ಲಿ ಯಾವ ಸಂಖ್ಯೆ ಬರಬೇಕು**?**




**(a)** 25
**(b)** 37
**(c)** 41
**(d)** 47

85. ಪ್ರಶ್ನಾರ್ಥಕ ಚಿಹ್ನೆ **(?)** ಸ್ಥಾನದಲ್ಲಿ ಯಾವ ಸಂಖ್ಯೆ ಬರಬೇಕು**?**




**(a)** 36
**(b)** 48
**(c)** 38
**(d)** 30

86. ಕೆಳಗಿನ ಪದಗಳಲ್ಲಿ ಉಳಿದವುಗಳಿಗಿಂತ ಭಿನ್ನವಾದುದನ್ನು ಆಯ್ಕೆಮಾಡಿ.
**(a)** ಕೋಳಿ **(Chicken)**
**(b)** ಹಾವು **(Snake)**
**(c)** ಮೊಸಳೆ **(Crocodile)**
**(d)** ಕಪ್ಪೆ **(Frog)**

87. ಒಬ್ಬ ವ್ಯಕ್ತಿ ಒಂದು ಪ್ರಯಾಣವನ್ನು 10 ಗಂಟೆಗಳಲ್ಲಿ ಪೂರ್ಣಗೊಳಿಸುತ್ತಾನೆ. ಪ್ರಯಾಣದ ಮೊದಲ ಅರ್ಧವನ್ನು 21 ಕಿ.ಮೀ/ಗಂ ವೇಗದಲ್ಲಿ ಮತ್ತು ಎರಡನೇ ಅರ್ಧವನ್ನು 24 ಕಿ.ಮೀ/ಗಂ ವೇಗದಲ್ಲಿ ಸಾಗುತ್ತಾನೆ. ಒಟ್ಟು ಪ್ರಯಾಣದ ದೂರ ಎಷ್ಟು**?**
**(a)** 220 ಕಿ.ಮೀ
**(b)** 224 ಕಿ.ಮೀ
**(c)** 230 ಕಿ.ಮೀ
**(d)** 234 ಕಿ.ಮೀ

88. ಎರಡು ಸಂಖ್ಯೆಗಳ **H.C.F.** = 23. ಅವುಗಳ **L.C.M.** ಯ ಇತರ ಎರಡು ಗುಣಕಗಳು 13 ಮತ್ತು 14 ಆಗಿದ್ದರೆ, ದೊಡ್ಡ ಸಂಖ್ಯೆ ಯಾವುದು**?**
**(a)** 276
**(b)** 299
**(c)** 322
**(d)** 345

89. ಎರಡು ಗಂಟೆಗಳು ಒಂದೇ ಸಮಯದಲ್ಲಿ ಮೊಳಗಲು ಆರಂಭಿಸುತ್ತವೆ ಮತ್ತು ಕ್ರಮವಾಗಿ 2, 4, 6, 8, 10 ಮತ್ತು 12 ಸೆಕೆಂಡುಗಳ ಅಂತರದಲ್ಲಿ ಮೊಳಗುತ್ತವೆ. 30 ನಿಮಿಷಗಳಲ್ಲಿ ಅವು ಎಷ್ಟು ಬಾರಿ ಒಟ್ಟಿಗೆ ಮೊಳಗುತ್ತವೆ**?**
**(a)** 4
**(b)** 10
**(c)** 15
**(d)** 16

90. **A, B** ಮತ್ತು **C** ಕ್ರಮವಾಗಿ 20, 30 ಮತ್ತು 60 ದಿನಗಳಲ್ಲಿ ಒಂದು ಕೆಲಸವನ್ನು ಮಾಡಬಲ್ಲರು. ಪ್ರತಿ ಮೂರನೇ ದಿನ **B** ಮತ್ತು **C, A** ಗೆ ಸಹಾಯ ಮಾಡಿದರೆ, **A** ಎಷ್ಟು ದಿನಗಳಲ್ಲಿ ಕೆಲಸವನ್ನು ಪೂರ್ಣಗೊಳಿಸುತ್ತಾನೆ**?**
**(a)** 12 ದಿನಗಳು
**(b)** 15 ದಿನಗಳು
**(c)** 16 ದಿನಗಳು
**(d)** 18 ದಿನಗಳು

91. 130 ಮೀ ಉದ್ದದ ರೈಲು 45 ಕಿ.ಮೀ/ಗಂ ವೇಗದಲ್ಲಿ ಚಲಿಸಿ 30 ಸೆಕೆಂಡುಗಳಲ್ಲಿ ಒಂದು ಸೇತುವೆಯನ್ನು ದಾಟುತ್ತದೆ. ಆ ಸೇತುವೆಯ ಉದ್ದ ಎಷ್ಟು**?**
**(a)** 200 ಮೀ
**(b)** 225 ಮೀ
**(c)** 245 ಮೀ
**(d)** 250 ಮೀ

92. ಒಂದು ನಿರ್ದಿಷ್ಟ ಭಾಷೆಯಲ್ಲಿ **APPROACH** ಅನ್ನು **YRNTMCF** ಎಂದು ಬರೆಯಲಾಗುತ್ತದೆ. ಹಾಗಾದರೆ **OBJECTIVE** ಅನ್ನು ಹೇಗೆ ಬರೆಯಲಾಗುತ್ತದೆ**?**
**(a) MGDHGAVXIG**
**(b) MDHGAVHTG**
**(c) MDHGAVGXC**
**(d) MDGHAVITG**

93. 517*324 ಎಂಬ ಸಂಖ್ಯೆ 3 ರಿಂದ ಸಂಪೂರ್ಣವಾಗಿ ಭಾಗವಾಗಬೇಕಾದರೆ, * ಸ್ಥಾನದಲ್ಲಿ ಬರಬಹುದಾದ ಅತಿ ಚಿಕ್ಕ ಪೂರ್ಣ ಸಂಖ್ಯೆ ಯಾವುದು**?**
**(a)** 0
**(b)** 1
**(c)** 2
**(d)** ಇವುಗಳಲ್ಲಿ ಯಾವುದೂ ಅಲ್ಲ

**94.** If South-East becomes North, North-East becomes West and so on. What will West become?
(a) North-East
(b) North-West
(c) South-East
(d) South-West

**95.** Complete the sequence given below. Gfe_ig_eii_fei_gf_ii
(a) eigfi
(b) ifgie
(c) figie
(d) ifige

**96.** Deepak said to Nitin, "That boy playing with the football is the younger of the two brothers of the daughter of my father's wife." How is the boy playing football related to Deepak?
(a) Son
(b) Brother
(c) Cousin
(d) Brother-in-law

**97.** Pointing a photograph X said to his friend Y, "She is the only daughter of the father of my mother." How X is related to the person of photograph?
(a) Daughter
(b) Son
(c) Nephew
(d) Cannot be decided

**98.** A, P, R, X, S and Z are sitting in a row. S and Z are in the centre. A and P are at the ends. R is sitting to the left of A. Who is to the right of P?
(a) A
(b) X
(c) S
(d) Z

**99.** In a certain code 'BEAD' is written as '7#94' and 'GREY' is written as '$%#8'. How is 'READY' written in that code?
(a) $%497.
(b) %#948.
(c) 794$%#.
(d) 847%$#

**100.** The calendar for the year 2025 is same for?
(a) 2029
(b) 2030
(c) 2031
(d) 2033

VIDHVATH

94. ಆಗ್ನೇಯ **(South-East)** ಉತ್ತರವಾಗುತ್ತದೆ**,** ಈಶಾನ್ಯ **(North-East)** ಪಶ್ಚಿಮವಾಗುತ್ತದೆ ಮತ್ತು ಹೀಗೆ ಮುಂದುವರಿದರೆ**,** ಪಶ್ಚಿಮ ಯಾವ ದಿಕ್ಕಾಗುತ್ತದೆ**?**

**(a)** ಈಶಾನ್ಯ **(North-East)**
**(b)** ವಾಯವ್ಯ **(North-West)**
**(c)** ಆಗ್ನೇಯ **(South-East)**
**(d)** ನೈಋತ್ಯ **(South-West)**

95. ಕೆಳಗಿನ ಸರಣಿಯನ್ನು ಪೂರ್ಣಗೊಳಿಸಿ: **Gfe_ig_eii_fei_gf_ii**

**(a) eigfi**
**(b) ifgie**
**(c) figie**
**(d) ifige**

96. ದೀಪಕ್ ನಿತಿನ್‌ಗೆ ಹೇಳಿದನು: "ಫುಟ್‌ಬಾಲ್ ಆಡುತ್ತಿರುವ ಆ ಹುಡುಗನು ನನ್ನ ತಂದೆಯ ಹೆಂಡತಿಯ ಮಗಳ ಇಬ್ಬರು ಸಹೋದರರಲ್ಲಿ ಕಿರಿಯವನು." ಫುಟ್‌ಬಾಲ್ ಆಡುತ್ತಿರುವ ಹುಡುಗನು ದೀಪಕ್‌ಗೆ ಏನಾಗುತ್ತಾನೆ**?**

**(a)** ಮಗ
**(b)** ಸಹೋದರ
**(c)** ಸಂಬಂಧಿ **(Cousin)**
**(d)** ಬಾವ **(Brother-in-law)**

97. ಒಂದು ಛಾಯಾಚಿತ್ರವನ್ನು ತೋರಿಸಿ **X** ತನ್ನ ಸ್ನೇಹಿತ **Y** ಗೆ ಹೇಳಿದನು: "ಅವಳು ನನ್ನ ತಾಯಿಯ ತಂದೆಯ ಏಕೈಕ ಮಗಳು." ಛಾಯಾಚಿತ್ರದಲ್ಲಿರುವ ವ್ಯಕ್ತಿಗೆ **X** ಏನಾಗುತ್ತಾನೆ**?**

**(a)** ಮಗಳು
**(b)** ಮಗ
**(c)** ಸೋದರಳಿಯ / ಸೋದರಮಗ **(Nephew)**
**(d)** ನಿರ್ಧರಿಸಲಾಗುವುದಿಲ್ಲ

98. **A, P, R, X, S** ಮತ್ತು **Z** ಸಾಲಿನಲ್ಲಿ ಕುಳಿತಿದ್ದಾರೆ. **S** ಮತ್ತು **Z** ಮಧ್ಯದಲ್ಲಿದ್ದಾರೆ. **A** ಮತ್ತು **P** ತುದಿಗಳಲ್ಲಿದ್ದಾರೆ. **R, A** ಯ ಎಡಭಾಗದಲ್ಲಿ ಕುಳಿತಿದ್ದಾನೆ. **P** ಯ ಬಲಭಾಗದಲ್ಲಿ ಯಾರು ಇದ್ದಾರೆ**?**

**(a) A**
**(b) X**
**(c) S**
**(d) Z**

99. ಒಂದು ಸಂಕೇತ ಭಾಷೆಯಲ್ಲಿ **'BEAD'** ಅನ್ನು **'7#94'** ಎಂದು ಮತ್ತು **'GREY'** ಅನ್ನು **'$%#8'** ಎಂದು ಬರೆಯುತ್ತಾರೆ. ಹಾಗಾದರೆ **'READY'** ಅನ್ನು ಹೇಗೆ ಬರೆಯುತ್ತಾರೆ**?**

**(a)** $%497
**(b)** %#948
**(c)** 794$%#
**(d)** 847%$#

100. 2025ನೇ ವರ್ಷದ ಕ್ಯಾಲೆಂಡರ್ ಯಾವ ವರ್ಷದ ಕ್ಯಾಲೆಂಡರ್‌ಗೆ ಒಂದೇ ರೀತಿ ಇರುತ್ತದೆ**?**

**(a)** 2029
**(b)** 2030
**(c)** 2031
**(d)** 2033

# ವಿದ್ವತ್ ಸ್ಪರ್ಧಾತ್ಮಕ ಪರೀಕ್ಷಾ ಅಕಾಡೆಮಿ

Ph: +91 99722 58970, +91 97407 02455


## ಮಿಷನ್ ಗರುಡ ಪಿಸಿ ಪರೀಕ್ಷಾ ಸರಣಿ

## MGT006: ಮಾನಸಿಕ ಸಾಮರ್ಥ್ಯ

## ಪ್ರಶ್ನೆ ಪತ್ರಿಕೆ

*ಅವಧಿ:1½ ಗಂಟೆ* *ಗರಿಷ್ಠ ಅಂಕಗಳು: 100*

### ಸೂಚನೆಗಳು

1. ಪರೀಕ್ಷೆಯ ಪ್ರಾರಂಭದ ನಂತರ ತಕ್ಷಣವೇ, ಈ ಪ್ರಶ್ನೆ ಪತ್ರಿಕೆಯಲ್ಲಿ ಯಾವುದೇ ರೀತಿಯ ಲೋಪದೋಷಗಳು ಕಂಡುಬಂದಲ್ಲಿ ಅದನ್ನು ಹೊಸ ಪರೀಕ್ಷಾ ಪತ್ರಿಕೆ ಮೂಲಕ ಬದಲಿಸಿ.
2. ಪರೀಕ್ಷೆಯ ಪುಸ್ತಕ ಸರಣಿ A, B, C ಅಥವಾ D ಅನ್ನು ಸ್ಪಷ್ಟವಾಗಿ ಎನ್ಕೋಡ್ ಮಾಡಿ ಉತ್ತರ ಹಾಳೆಯಲ್ಲಿ ಸೂಕ್ತ ಸ್ಥಳದಲ್ಲಿ ತುಂಬಬೇಕು.
3. ಪರೀಕ್ಷಾ ಬುಕ್‌ಲೆಟ್‌ನಲ್ಲಿ ನಿಮ್ಮ ಮೊಬೈಲ್ ಸಂಖ್ಯೆಯನ್ನು ನೀವು ಪಕ್ಕದಲ್ಲಿರುವ ಬಾಕ್ಸ್‌ನಲ್ಲಿ ನಮೂದಿಸಬೇಕು. ಪ್ರಶ್ನೆ ಪತ್ರಿಕೆಯಲ್ಲಿ ಬೇರೆ ಏನನ್ನೂ ಬರೆಯಬೇಡಿ.
4. ಈ ಪ್ರಶ್ನೆ ಪತ್ರಿಕೆಯಲ್ಲಿ 100 ಪ್ರಶ್ನೆಗಳನ್ನು ಒಳಗೊಂಡಿದೆ. ಪ್ರತಿಯೊಂದು ಪ್ರಶ್ನೆಗಳನ್ನು ಇಂಗ್ಲಿಷ್ ಮತ್ತು ಕನ್ನಡದಲ್ಲಿ ಮುದ್ರಿಸಲಾಗಿದೆ. ಪ್ರತಿ ಪ್ರಶ್ನೆಯು ನಾಲ್ಕು ಪ್ರತಿಕ್ರಿಯೆಗಳನ್ನು ಒಳಗೊಂಡಿದೆ (ಉತ್ತರಗಳು). ನೀವು ಓ.ಎಂ.ಆರ್ ಹಾಳೆಯಲ್ಲಿ ಗುರುತಿಸಲು ಬಯಸುವ ಪ್ರತಿಕ್ರಿಯೆಯನ್ನು ಮಾತ್ರ ಗುರುತಿಸಿ. ಪ್ರತಿ ಪ್ರಶ್ನೆಗೆ ಕೇವಲ ಒಂದು ಉತ್ತರವನ್ನು ಆಯ್ಕೆಮಾಡಿ.
5. ಪ್ರಶ್ನೆ ಪತ್ರಿಕೆಯಲ್ಲಿನ ಪ್ರಶ್ನೆಗೆ ಅನುಗುಣವಾಗಿರುವ ಸರಿ ಉತ್ತರವನ್ನು ಓ.ಎಂ.ಆರ್. ಉತ್ತರ ಪತ್ರಿಕೆಯಲ್ಲಿ ಅದೇ ಕ್ರಮ ಸಂಖ್ಯೆಯ ಮುಂದೆ ನೀಡಿರುವ ಸಂಬಂಧಿಸಿದ ವೃತ್ತವನ್ನು ನೀಲಿ ಅಥವಾ ಕಪ್ಪು ಶಾಯಿಯ ಬಾಲ್ ಪಾಯಿಂಟ್ ಪೆನ್‌ನಿಂದ ಸಂಪೂರ್ಣ ತುಂಬುವುದು.
6. ಎಲ್ಲಾ ಪ್ರಶ್ನೆಗಳು ಸಮಾನ ಅಂಕಗಳನ್ನು ಹೊಂದಿರುತ್ತವೆ. ನಿಮ್ಮ ಒಟ್ಟು ಅಂಕಗಳು ಉತ್ತರ ಪತ್ರಿಕೆಯಲ್ಲಿ ನೀವು ಗುರುತಿಸಿರುವ ಸರಿಯಾದ ಪ್ರತಿಕ್ರಿಯೆಗಳ ಸಂಖ್ಯೆಯನ್ನು ಅವಲಂಬಿಸಿರುತ್ತದೆ. ಪ್ರತಿ ತಪ್ಪಾದ ಪ್ರತಿಕ್ರಿಯೆಗೆ ನಿಗದಿಪಡಿಸಿದ ಅಂಕಗಳ 1/4(0.25) ನೇ ಭಾಗವನ್ನು ಕಡಿತಗೊಳಿಸಲಾಗುತ್ತದೆ.
7. ಯಾವುದೇ ರೀತಿಯ ಮೊಬೈಲ್ ಫೋನ್, ಕ್ಯಾಲ್ಕ್ಯುಲೇಟರ್ ಮತ್ತು ಇತರೆ ರೀತಿಯ ಎಲೆಕ್ಟ್ರಾನಿಕ್ /ಕಮ್ಯುನಿಕೇಷನ್ ಸಾಧನಗಳು ಇತ್ಯಾದಿಗಳನ್ನು ಪರೀಕ್ಷಾ ಕೇಂದ್ರದ ಆವರಣದೊಳಗೆ ತರುವುದನ್ನು ನಿಷೇಧಿಸಿದೆ.
8. ನೀವು ಉತ್ತರ ಪತ್ರಿಕೆಯಲ್ಲಿ ಎಲ್ಲಾ ಪ್ರತಿಕ್ರಿಯೆಗಳನ್ನು ಭರ್ತಿ ಮಾಡಿದ ನಂತರ ಮತ್ತು ಪರೀಕ್ಷೆಯು ಮುಕ್ತಾಯಗೊಂಡ ನಂತರ, ನೀವು ಓ.ಎಂ.ಆರ್ ಪತ್ರಿಕೆಯನ್ನು ಮಾತ್ರ ಪರೀಕ್ಷಾ ನಿಯಂತ್ರಕರಿಗೆ ಹಸ್ತಾಂತರಿಸಬೇಕು.
9. ಕೊನೆಯ ಬೆಲ್ ಆದ ನಂತರ ಉತ್ತರಿಸುವುದನ್ನು ನಿಲ್ಲಿಸಿ, ಓ.ಎಂ.ಆರ್. ಉತ್ತರ ಪತ್ರಿಕೆಯನ್ನು ಕೊಠಡಿ ಮೇಲ್ವಿಚಾರಕರಿಗೆ ಯಥಾಸ್ಥಿತಿಯಲ್ಲಿ ನೀಡಿರಿ.
10. ಪ್ರಶ್ನೆ ಪತ್ರಿಕೆ ಯನ್ನು ನಿಮ್ಮೊಂದಿಗೆ ತೆಗೆದುಕೊಂಡು ಹೋಗಲು ನಿಮಗೆ ಅನುಮತಿ ಇದೆ.
11. ಕಚ್ಚಾ ಕೆಲಸಕ್ಕಾಗಿ ಹಾಳೆಯನ್ನು ಪ್ರಶ್ನೆ ಪತ್ರಿಕೆ ಕೊನೆಯಲ್ಲಿ ಲಗತ್ತಿಸಲಾಗಿದೆ.

**ಪರೀಕ್ಷಾ ನಿಯಂತ್ರಕರು ತಿಳಿಸುವರೆಗೂ ಪ್ರಶ್ನೆ ಪತ್ರಿಕೆಯನ್ನು ತೆರೆಯಬೇಡ**


©ವಿದ್ವತ್

# VIDHVATH ACADEMY FOR COMPETITIVE EXAMS

## MISSION GARUDA PC TEST SERIES
## MGT004: GEOGRAPHY

# KEY ANSWERS

| | | | | | | | |
|---|---|---|---|---|---|---|---|
| 1 | A | 26 | B | 51 | B | 76 | A |
| 2 | A | 27 | B | 52 | C | 77 | A |
| 3 | D | 28 | C | 53 | C | 78 | B |
| 4 | C | 29 | B | 54 | D | 79 | B |
| 5 | C | 30 | C | 55 | B | 80 | B |
| 6 | C | 31 | C | 56 | C | 81 | B |
| 7 | D | 32 | D | 57 | C | 82 | C |
| 8 | C | 33 | B | 58 | D | 83 | C |
| 9 | B | 34 | C | 59 | D | 84 | B |
| 10 | D | 35 | B | 60 | D | 85 | B |
| 11 | B | 36 | C | 61 | C | 86 | B |
| 12 | A | 37 | B | 62 | A | 87 | C |
| 13 | D | 38 | B | 63 | C | 88 | C |
| 14 | C | 39 | A | 64 | C | 89 | A |
| 15 | C | 40 | B | 65 | B | 90 | A |
| 16 | C | 41 | C | 66 | C | 91 | C |
| 17 | A | 42 | B | 67 | C | 92 | D |
| 18 | B | 43 | D | 68 | C | 93 | A |
| 19 | B | 44 | A | 69 | B | 94 | D |
| 20 | A | 45 | C | 70 | C | 95 | C |
| 21 | B | 46 | A | 71 | B | 96 | B |
| 22 | C | 47 | B | 72 | B | 97 | B |
| 23 | C | 48 | D | 73 | C | 98 | A |
| 24 | C | 49 | B | 74 | B | 99 | A |
| 25 | C | 50 | B | 75 | B | 100 | B |

VIDHVATH